ಆಸ್ತಿ ತೆರಿಗೆ ವಸೂಲಿ

1191(1716); ಶ್ರೀ ಕೆ. ಗೋಪಾಲಯ್ಯ (ಮಹಾಲಕ್ಷ್ಮಿಲೇಔಟ್)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರತಕ್ಕ ವಾಣಿಜ್ಯ ವಸತಿ ಹಾಗೂ ಇತರ ಆಸ್ತಿಗಳ ಸಂಖ್ಯೆ ಎಷ್ಟು;

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಗೆ ಒಳಪಡದೇ ಇರತಕ್ಕ ಆಸ್ತಿಗಳನ್ನು ಪತ್ತೆ ಮಾಡಲು ಕೈಗೊಂಡ ಕ್ರಮಗಳೇನು;

ಇ) ಇದುವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆದಾರರಿಂದ ಬರಬೇಕಾದ ಬಾಕಿ ಎಷ್ಟು;

ಈ) ಈ ಆಸ್ತಿ ತೆರಿಗೆ ಬಾಕಿಯನ್ನು ವಸೂಲು ಮಾಡಲು ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಭೌಗೋಳಿಕ ಸಮೀಕ್ಷೆ ಆಧಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 16,98,457 ವಾಣಿಜ್ಯ, ವಸತಿ ಹಾಗೂ ಇತರ ಆಸ್ತಿಗಳಿರುತ್ತವೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೌಗೋಳಿಕ ಸಮೀಕ್ಷೆ ಆಧಾರ ಸರ್ವೇ ಕಾರ್ಯ ಕೈಗೊಂಡು ಆಸ್ತಿ ತೆರಿಗೆಗೆ ಒಳಪಡದೇ ಇರತಕ್ಕ ಆಸ್ತಿಗಳನ್ನು ಗುರುತಿಸಲಾಗುತ್ತಿದೆ.

ಇ) 2015–16ನೇ ಸಾಲಿನಲ್ಲಿ ನಿಗಧಿಪಡಿಸಲಾಗಿರುವ ಗುರಿಯಂತೆ ದಿನಾಂಕ: 03–07–2015 ರವರೆಗೆ ಇನು ರೂ.1682.82 ಕೋಟಿಗಳ ಆಸ್ತಿ ತೆರಿಗೆಯನ್ನು ಸಂಗ್ರಹಿಸಬೇಕಾಗಿರುತ್ತದೆ.

ಈ) ಪ್ರಸ್ತುತ, ಹಣಕಾಸು ವರ್ಷವು ಮಾರ್ಚ್ 2016ಕ್ಕೆ ಮುಕ್ತಾಯಗೊಳ್ಳಲಿದ್ದು, ಆಸ್ತಿ ತೆರಿಗೆಯನ್ನು ಕೆ.ಎಂ.ಸಿ. ಕಾಯ್ದೆ ಅಡಿಯಲ್ಲಿ ವಸೂಲಾತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.